**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 513 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾಗಿದ್ದ ದಿನಾಂಕ | : | 12.12.2024. |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಸೇರಿದಂತೆ ರಾಜ್ಯದಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ವಾಯು ಭಾರ ಕುಸಿತದಿಂದ ಸುರಿದ ಮಳೆಯಿಂದಾಗಿ ನಗರದ ಬಹಳಷ್ಟು ಬಡಾವಣೆಗಳ ವಸತಿ ಸಮುಚ್ಚಯಗಳು ದ್ವೀಪಗಳಂತಾದುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ |
| ಆ) | ಇಂತಹ ವಾಯು ಭಾರ ಕುಸಿತದಿಂದ ಮಳೆ ಈ ಹಿಂದಿನಿಂದಲೂ ಹಲವು ವರ್ಷಗಳಲ್ಲಿ ಸಾಕಷ್ಟು ಭಾರಿ ಹಾನಿ ಮಾಡಿದ್ದರೂ ಸಹ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿರುವುದರಿಂದ ಆಗುತ್ತಿರುವ ತೊಂದರೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ (ಮಹಾನಗರ ಪಾಲಿಕೆ ಒಳಗೊಂಡಂತೆ) ಮಳೆಗಾಲದ ಸಂದರ್ಭದಲ್ಲಿ ಎದುರಾಗುವ ಸವಾಲುಗಳನ್ನು ನಿರ್ವಹಿಸಲು ಅಗತ್ಯ ಮುನ್ನೆಚ್ಚರಿಕೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವ ಬಗ್ಗೆ ಪೌರಾಡಳಿತ ನಿರ್ದೇಶನಾಲಯದ ದಿನಾಂಕ: 22.06.2024., 01.07.2024 ಮತ್ತು 17.08.2024ರ ಪತ್ರಗಳಲ್ಲಿ ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರುಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರುಗಳಿಗೆ ಸೂಚಿಸಲಾಗಿರುತ್ತದೆ.<br><br>**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ :-**<br><br>2020-21ನೇ ಸಾಲಿನಿಂದ ಈ ರೀತಿಯ ವಾಯು ಭಾರ ಕುಸಿತದಿಂದ "ಅಲ್ಪಾವಧಿಯಲ್ಲಿ ಗರಿಷ್ಠ ತೀವ್ರತೆ ಮಳೆ" (Less Duration High Intensity Rainfall) ಮತ್ತು ಮೋಡ ಕಂಪನ (Cloud Burst) ದಿಂದ ಮಳೆಯಾಗುತ್ತಿರುವ ಹವಾಮಾನವನ್ನು ಎದುರಿಸುತ್ತಿದ್ದು, ಇಂತಹ ಪರಿಸ್ಥಿತಿಗಳನ್ನು ನಿಭಾಯಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಸಂಸ್ಥೆಯ ಸಹಯೋಗದೊಂದಿಗೆ "ಮೇಘ ಸಂದೇಶ" ಎಂಬ ಮೊಬೈಲ್ ತಂತ್ರಾಂಶವನ್ನು ಜಾರಿಗೊಳಿಸಲಾಗಿದ್ದು, ಹವಮಾನ ಮುನ್ಸೂಚನೆಯನ್ನು ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br><br>ಸದರಿ ವ್ಯವಸ್ಥೆಯಂತೆ ವಾಹನ ಮಾರ್ಗ ಬದಲಾವಣೆ, ಪ್ರದೇಶವಾರು ಮಳೆಯಾಗುವಿಕೆ ನಕ್ಷೆ ಮತ್ತು ರಾಜಕಾಲುವೆಗಳಲ್ಲಿ ಸೆನ್ಸರ್‌ಯುಕ್ತ ಕ್ಯಾಮಾರಾಗಳನ್ನು ಅಳವಡಿಸಲಾಗಿರುತ್ತದೆ. ಸದರಿ ವ್ಯವಸ್ಥೆಯಿಂದ ಲಭಿಸುವ ಮಾಹಿತಿಯನ್ನು ಬೃಹತ್ |


| | | |
|---|---|---|
| | | ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೇಂದ್ರೀಕೃತ ಸಂಯುಕ್ತ ನಿಯಂತ್ರಣಾ ಘಟಕ (Integrated Control Command Centre) ಅನ್ನು ಸ್ಥಾಪಿಸಲಾಗಿದ್ದು, ಇದರಿಂದಾಗಿ ಮಳೆಯಿಂದ ಆಗುವ ಅನಾಹುತಗಳಿಗೆ ತುರ್ತು ಸೌಲಭ್ಯಗಳನ್ನು ಕಲ್ಪಿಸುವ ಕ್ರಮಗಳನ್ನು ಸರ್ಕಾರವು ಕೈಗೊಂಡಿರುತ್ತದೆ.<br><br>ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿ ವರ್ಷ 1ನೇ ಜೂನ್ ನಿಂದ 31 ಆಕ್ಟೋಬರ್‌ವರೆಗೂ ವಲಯ ನಿಯಂತ್ರಣ ಘಟಕಗಳಲ್ಲದೇ ಉಪ ವಿಭಾಗ ಮಟ್ಟದಲ್ಲಿ 63 ನಿಯಂತ್ರಣ ಘಟಕಗಳನ್ನು ಸ್ಥಾಪಿಸುವ ಕ್ರಮವನ್ನು ಜಾರಿಗೊಳಿಸಲಾಗಿದ್ದು, ಪರಿಣಾಮಕಾರಿಯಾಗಿ ಮಳೆ ವಿಕೋಪ ಅನಾಹುತಗಳನ್ನು ಅತೀ ಶೀಘ್ರದಲ್ಲಿ ಪರಿಹಾರ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಕ್ರಮಕೈಗೊಳ್ಳಲಾಗಿದೆ.<br><br>ಅತೀ ಹೆಚ್ಚು ಮರಗಳು ಮಳೆಯಿಂದ ಭೂಮಿಗೆ ಬೀಳುತ್ತಿರುವ ಸಮಸ್ಯೆಯನ್ನು ಎದುರಿಸಲು ಮಳೆಗಾಲದ ಸಮಯದಲ್ಲಿ 03 ಪಾಳೆಯಗಳಲ್ಲಿ 28 ಅರಣ್ಯ ತಂಡಗಳನ್ನು ಸ್ಥಾಪಿಸುವ ಕ್ರಮ ಜಾರಿಯಲ್ಲಿರುತ್ತದೆ. ಮುಂದುವರೆದು, ವಿಪತ್ತು ನಿರ್ವಹಣೆಗಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ನೇತೃತ್ವದಲ್ಲಿ "ವಿಪತ್ತು ನಿರ್ವಹಣಾ ತಂಡ"ವನ್ನು ಅಗ್ನಿ ಶಾಮಕ ದಳ, ಬೆಸ್ಕಾಂ, ಬೆಂಗಳೂರು ಜಲ ಮಂಡಳಿ, ಅರಣ್ಯ, ಎನ್.ಡಿ.ಆರ್.ಎಫ್, ಎಸ್.ಡಿ.ಆರ್.ಎಫ್ ತಂಡಗಳನ್ನು ರಚಿಸಲಾಗಿದ್ದು, ಯಾವುದೇ ವಿಪತ್ತನ್ನು ಕಡಿಮೆಗೊಳಿಸಲು ಮತ್ತು ಶೀಘ್ರ ಕಾರ್ಯಚರಣೆಗಾಗಿ ವಾಟ್ಸ್‌ಅಪ್ ತಂಡವನ್ನು ರಚಿಸಲಾಗಿರುತ್ತದೆ.<br><br>ಹವಾಮಾನ ಮುನ್ಸೂಚನಾ ಸಂಸ್ಥೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪ್ರತಿ ದಿನ ಮಳೆಯಾಗುವ ವಿವರಗಳನ್ನು ಪಡೆಯಲಾಗುತ್ತಿರುತ್ತದೆ. ಮಳೆ ಮುನ್ಸೂಚನೆ ಮಾದರಿ ಪ್ರತಿಯನ್ನು **ಅನುಬಂಧ-ಅ ರಲ್ಲಿ** ನೀಡಿದೆ.<br><br>ಈ ಮೇಲ್ಕಂಡಂತೆ ವಿವಿಧ ಹಂತಗಳಲ್ಲಿ ಸರ್ಕಾರವು ತೀವ್ರತರದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಿದೆ. |


**ಸಂಖ್ಯೆ: ನಅಇ 571 ಎಂಎನ್‌ವೈ 2024 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

# ಅನುಬಂಧ–ಅ

## ಐಸಿಸಿಸಿ - (ಇಂಟಿಗ್ರೇಟೆಡ್ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್)






ಮಳೆ ಮುನ್ಸೂಚನೆ ಮಾದರಿ ಪ್ರತಿ